

## ವಾದದ ಮೂಲಸ್ಥಾನಗಳು

ವಾದಗಳು ಮುಖ್ಯವಾಗಿ ಮೂರು ಮೂಲಗಳಿಂದ ಉದಿಸುತ್ತವೆ ಎನ್ನಲಾಗುತ್ತದೆ.

ತಲೆಯಿಂದ ಮೂಡುವ ವಾದ: ಇದನ್ನು ಮಾಹಿತಿ, ಸಾಕ್ಷ್ಯ, ಆಧಾರಗಳನ್ನು ನೀಡುವ ಮೂಲಕ ತಣಿಸಬಹುದು. ಈ ರೀತಿಯ ವಾದವನ್ನು ಸುಲಭವಾಗಿ ಬಗೆಹರಿಸಿಕೊಳ್ಳಬಹುದು.

ಹೃದಯದಿಂದ ಹುಟ್ಟುವ ವಾದ: ಇದು ಆಯಾ ವ್ಯಕ್ತಿಗಳ ವೈಯಕ್ತಿಕ ನಂಬಿಕೆ, ಇಷ್ಟ, ಅಭಿರುಚಿಗಳನ್ನು ಅವಲಂಬಿಸಿದ ವಿಚಾರ. ಇಂತಹ ವಾದ–ವಿವಾದಗಳನ್ನು ಬಗೆಹರಿಸುವುದು ಕಷ್ಟ. ಏಕೆಂದರೆ ಅವರು ತಮ್ಮಿಷ್ಟಕ್ಕೆ ತಕ್ಕಂತೆ ಅಭಿಪ್ರಾಯಗಳನ್ನು ಹೊಂದಿರುವ ಜನ. ಅವರನ್ನು ಅರ್ಥಮಾಡಿಕೊಳ್ಳುವ ಮೂಲಕ ಅಥವಾ ಹೊಂದಾಣಿಕೆ ಮಾಡಿಕೊಳ್ಳುವ ಮೂಲಕ ಮಾತ್ರ ಬಗೆಹರಿಸಿಕೊಳ್ಳಲು ಸಾಧ್ಯ.

ಕೈಗಳಿಂದ ಹುಟ್ಟುವ ವಾದ: ಕೆಲವರ ವಾದಗಳನ್ನು ಅಗತ್ಯವಾದ ಪರೀಕ್ಷೆಗಳಿಂದ ಅಥವಾ ಕಾಲಾನುಕ್ರಮದಲ್ಲಿ ಸಮಯ ತರುವ ಬದಲಾವಣೆಗಳಿಂದ ಮಾತ್ರ ಬಗೆಹರಿಸಬಹುದು. ಅಥವಾ ಕೆಲವು ಪರೀಕ್ಷೆಗಳನ್ನು ಶುರುಮಾಡಲು ಸಲಹೆ ನೀಡಿ ಕಾಲಾನುಕ್ರಮದಲ್ಲಿ ದೊರೆಯುವ ಫಲಿತಾಂಶವೇ ಅವರ ಅಭಿಪ್ರಾಯಗಳನ್ನು ಬದಲಿಸಲಿ ಎಂದು ಕೈ ಬಿಡಬೇಕು. ಇವರನ್ನು ನೇರ ಮಾತಿನಿಂದ ಒಪ್ಪಿಸುವುದು ಸಾಧ್ಯವಿಲ್ಲ. ಅರ್ಥಮಾಡಿಕೊಳ್ಳುವ ಮೂಲಕ ಕೂಡ ಇವರ ಜೊತೆ ಹೊಂದಾಣಿಕೆ ಮಾಡಿಕೊಳ್ಳಲು ಕಷ್ಟಸಾಧ್ಯವಾಗಬಹುದು.

### ವಾದಗಳು ಹುಟ್ಟಿಕೊಂಡಿದ್ದು ಹೇಗೆ?

ಒಬ್ಬರು ಇನ್ನೊಬ್ಬರಿಗೆ ತಮ್ಮ ಅಭಿಪ್ರಾಯ, ಭಾವನಾತ್ಮಕತೆ, ತಿಳಿವಳಿಕೆ ಮತ್ತು ತಮಗೆ ಸರಿಯೆನಿಸಿದ್ದನ್ನು ರುಜುವಾತುಪಡಿಸುವ ತವಕದಿಂದ ವಾದಗಳು ಹುಟ್ಟುತ್ತವೆ. ಒಬ್ಬರು ಇತರರಿಗೆ ತಮ್ಮ ದೃಷ್ಟಿಕೋನವನ್ನು ಅರ್ಥಮಾಡಿಸುವ ಕಾತುರವನ್ನು ಹೊಂದಿರುವುದೇ ವಾದಗಳ ಜನನದ ಹಿಂದಿನ ಅಂತರ್ಯವಾಗಿದೆ. ವಾದಗಳು ಹುಟ್ಟುವುದು ಆ ಕ್ಷಣಕ್ಕೆ. ಆದರೆ ಅವುಗಳನ್ನು ಮಂಡಿಸಿದ ನಂತರ ಅವರ ವಾದದ ಸತ್ಯಾಸತ್ಯತೆಯನ್ನು ಎದುರಿಸಲು ಕೂಡ ವಾದವನ್ನು ಶುರುಮಾಡುವವರು ತಯಾರಿರಬೇಕಾಗುತ್ತದೆ.

ವಾದಗಳು ಹುಟ್ಟಲು ಮನುಷ್ಯನ ಬುದ್ಧಿಶಕ್ತಿಯೇ ಕಾರಣ. ಆ ಬುದ್ಧಿಶಕ್ತಿಯೇನು ಸಾಮಾನ್ಯದ್ದಲ್ಲ. ಆತ ಎಲ್ಲ ವಿಚಾರಗಳ ಬಗ್ಗೆ ಕಾರಣಯುಕ್ತವಾಗಿ ಚರ್ಚಿಸಬಲ್ಲ. ಯಾವುದೇ ವಿಚಾರದಲ್ಲಿ ತೊಡಗಿಕೊಂಡಾಗ ಆತನಲ್ಲಿ ಅವನಿಗೇ ಅರಿವಿಲ್ಲದಂತೆ ಅಭಿಪ್ರಾಯಗಳು ಮೂಡುತ್ತವೆ. ಅದಕ್ಕೆ ವಿರುದ್ಧ ವಿಚಾರಗಳೂ ತುಲನೆಗೊಳಗಾಗುತ್ತವೆ. ತಂತಾನೆ ಮೂಡುವ ಈ ಅಭಿಪ್ರಾಯಗಳು ಸೃಷ್ಟಿಸಬಲ್ಲ ದೃಷ್ಟಿಕೋನಗಳು ಪ್ರತಿಯೊಬ್ಬರಲ್ಲೂ ಭಿನ್ನವಾಗಿರಬಲ್ಲವು.

ಇದೇ ಕಾರಣದಿಂದ ವಾದ ಅಥವಾ ಆರ್ಗ್ಯುಮೆಂಟ್‌ನಲ್ಲಿ ತೊಡಗುವುದು ಮನುಷ್ಯನಿಗೆ ಅತ್ಯಂತ ಸುಲಭ. ಅದಕ್ಕೆ ಮಾಡಬೇಕಿರುವುದು ಹೆಚ್ಚೇನೂ ಇಲ್ಲ. ಯಾವುದೋ ಒಂದು ಅಭಿಪ್ರಾಯವನ್ನು ಒಪ್ಪದೆ ಅವನದೇ ಆದ ಅಭಿಪ್ರಾಯ ಅಥವಾ ದೃಷ್ಟಿಕೋನವನ್ನು ಮುಂದಿಟ್ಟರೆ ಸಾಕು, ಅವನಾಗಲೇ ವಾದದಲ್ಲಿ ಸಿಲುಕಿರುತ್ತಾನೆ.

### ಪ್ರಾಚೀನ ಸಾಕ್ಷ್ಯಗಳು

ವಾದಗಳ ಬಗೆಗಿನ ಚರ್ಚೆಗಳು ಪ್ರಾಚೀನ ಕಾಲದಿಂದಲೇ ದಾಖಲಾಗುತ್ತ ಬಂದಿವೆ. ಅದನ್ನು ಹತ್ತಿಕ್ಕುವ ಪ್ರಯತ್ನಗಳೂ ಅಷ್ಟೇ ಪ್ರಮಾಣದಲ್ಲಿ ದಾಖಲಾಗಿವೆ.

ಪ್ರಾಚೀನ ಈಜಿಪ್ಟಿನಲ್ಲಿ (1550 ಬಿ.ಸಿ.) ಗಂಡಂದಿರು ತಮ್ಮ ಹೆಂಡತಿಯರ ಜೊತೆ ವಾದ ಮಾಡುವ ಸಂದರ್ಭ ಬಂದಲ್ಲಿ ಮೌನಕ್ಕೆ ಶರಣಾಗಲು ಗಂಡಂದಿರಿಗೆ ಸಲಹೆ ಸಿಗುತ್ತಿತ್ತಂತೆ. ಇದು ವಾದ ನಿರಾಕರಣೆಯ ತಂತ್ರ. ಇಲ್ಲವೇ ಅಧಿಕಾರಯುತವಾಗಿ ಹೆಂಡತಿಯರನ್ನು ಹೆದರಿಸದಂತೆ ಹೇಳಲಾಗುತ್ತಿತ್ತಂತೆ. ಈಜಿಪ್ಟ್‌ನಲ್ಲಿ ಗಂಡಸರು ಬಲ ಪ್ರಯೋಗಿಸಿ ಹೆಂಡತಿಯರನ್ನು ದೊಡ್ಡ ಮಣ್ಣಿನ ಮಡಕೆ ಅಥವಾ ಹಳ್ಳವೊಂದರಲ್ಲಿ ಕೆಲಕಾಲ ಇಡಲಾಗುತ್ತಿತ್ತೆಂಬ ಉಲ್ಲೇಖಗಳಿವೆ. ಈ ಅನಾಗರಿಕತೆ ತಡೆಯಲಿಕ್ಕಾಗಿ ಗಂಡಸರಿಗೆ ಸಂಯಮದ ಪಾಠವನ್ನೂ ಹೇಳಿಕೊಡಲಾಗುತ್ತಿತ್ತೆಂದು ಭಾವಿಸಬಹುದು.

ಗ್ರೀಸ್ ದೇಶದ ಅಥೆನ್ಸ್‌ನಲ್ಲಿದ್ದ (380 ಬಿ.ಸಿ.) ಪ್ರಸಿದ್ಧ ದಾರ್ಶನಿಕ ಸಾಕ್ರೆಟಿಸ್‌ನ ವಿಚಾರವೇ ಬೇರೆಯಿತ್ತು. ಈತ ತನ್ನ ಹೆಂಡತಿ ಅಂತಿಪ್ಪೆಯ ಜೊತೆ ದೀರ್ಘ ಸಂವಾದಗಳಲ್ಲಿ ತೊಡಗಿಕೊಳ್ಳುತ್ತಿದ್ದ. 'ಆಕೆಯನ್ನು ಬಲವಂತವಾಗಿ ಯಾಕೆ ಬಾಯಿಮುಚ್ಚಿಸಬಾರದು?' ಎಂದು ಜನರು ಕೇಳಿದಾಗ, 'ಸಂಗಾತಿಯ ಜೊತೆಗೆ ಮಾಡುವ ವಾದ–ವಿವಾದಗಳು ದಾರ್ಶನಿಕನೊಬ್ಬನಿಗೆ ಬೇಕಾದ ಅನುನಯಿಸುವಿಕೆ ಮತ್ತು ಸಂಭಾಷಣೆಯ ಎಲ್ಲ ಕಲೆಗಾರಿಕೆಗೆ ಅತ್ಯಂತ ಸಹಕಾರಿ' ಎಂದು ಸಾಕ್ರೆಟಿಸ್ ಉತ್ತರಿಸಿದ್ದ.

19ನೇ ಶತಮಾನವನ್ನು ವಾದ–ವಿವಾದಗಳ ಶತಮಾನವೆಂದು ಬಣ್ಣಿಸಲಾಗಿದೆ. ಇಪ್ಪತ್ತೊಂದನೆಯ ಶತಮಾನದಲ್ಲಿ ವಾದಗಳ